

# ವಿಜಯ್ ಡಬಲ್ ಧಮಾಕ!

‘ಭೈರವ’, ‘ಮೆರ್ಸಲ್’ – ಇವೆರಡೂ ಸಿನಿಮಾಗಳು ತೆರೆಕಂಡಿದ್ದು 2017ರಲ್ಲಿ. ಅದಾದ ಮೇಲೆ, ತಲಪತಿ ವಿಜಯ್ ಅಭಿನಯದ ಎರಡು ಚಿತ್ರಗಳು ಒಂದೇ ವರ್ಷ ತೆರೆಕಂಡಿದ್ದೇ ಇಲ್ಲ. ಅಳೆದೂ ತೂಗಿ ಸಿನಿಮಾಗಳನ್ನು ಆಯ್ಕೆ ಮಾಡಿಕೊಳ್ಳುವ ಅವರು, ಈ ವರ್ಷ ಸಹ ಎರಡು ತಮಿಳು ಸಿನಿಮಾಗಳನ್ನು ಅಭಿಮಾನಿಗಳಿಗೆ ಉಡುಗೊರೆಯಾಗಿ ನೀಡಲು ಸಜ್ಜಾಗಿದ್ದಾರೆ.

‘ವಾರಿಸು’ ಸಿನಿಮಾ ಬಿಡುಗಡೆಗೆ ಈಗಾಗಲೇ ಸಿದ್ಧವಾಗಿದೆ. ರಶ್ಮಿಕಾ ಮಂದಣ್ಣ ಈ ಸಿನಿಮಾ ನಾಯಕಿ. ‘ಪುಷ್ಪಾ’ ಸಿನಿಮಾದ ಎರಡನೇ ಭಾಗದಲ್ಲಿ ರಶ್ಮಿಕಾ ಹೊರಬಂದಿದ್ದಾರೆಂಬ ಸುದ್ದಿ ಇದ್ದು, ಅವರ ಜಾಗದಲ್ಲಿ ಸಾಯಿ ಪಲ್ಲವಿ ಬಣ್ಣ ಹಚ್ಚಲಿದ್ದಾರೆ ಎನ್ನಲಾಗಿದೆ.

ತಮಿಳು ಹಾಗೂ ತೆಲುಗು ಸಿನಿಮಾಗಳ ಕೊಡು–ಕೊಳುವಿಕೆಯ ಉದಾಹರಣೆಯಾಗಿಯೂ ‘ವಾರಿಸು’ ಕಾಣಿಸುತ್ತಿದೆ. ತೆಲುಗಿನ ನಿರ್ದೇಶಕ ವಂಶಿ ಪಡಿಪಲ್ಲಿ ಇದನ್ನು ನಿರ್ದೇಶಿಸಿದ್ದಾರೆ. ‘ಮುನ್ನಾ’, ‘ಬೃಂದಾವನಂ’, ‘ಮಹರ್ಷಿ’ ತರಹದ ಹಿಟ್ ಚಿತ್ರಗಳನ್ನು ಕೊಟ್ಟ ನಿರ್ದೇಶಕರನ್ನು ವಿಜಯ್ ನೆಚ್ಚಿಕೊಂಡಿರುವುದು, ತೆಲುಗಿನಲ್ಲೂ ಅವರಿಗೆ ಗಮನಾರ್ಹ ಮಾರುಕಟ್ಟೆ ಇದೆಯೆನ್ನುವುದಕ್ಕೆ ಕನ್ನಡಿ ಹಿಡಿಯುತ್ತದೆ.

ಈ ವರ್ಷ ದೀಪಾವಳಿ ಹೊತ್ತಿಗೆ ಲೋಕೇಶ್ ಕನಕರಾಜ್ ನಿರ್ದೇಶನದ ಇನ್ನೊಂದು ಸಿನಿಮಾ ತೆರೆಕಾಣುವುದೂ ಬಹುತೇಕ ಪಕ್ಕಾ ಆಗಿದೆ. ಆ ಚಿತ್ರಕ್ಕೆ ‘ತಲಪತಿ 67’ ಎಂದು ತಾತ್ಕಾಲಿಕವಾಗಿ ಶೀರ್ಷಿಕೆ ಇಡಲಾಗಿದೆ. ತ್ರಿಶಾ, ಪ್ರಿಯಾ ಆನಂದ್, ಗೌತಮ್ ಮೆನನ್, ಅರ್ಜುನ್ ಆ ಸಿನಿಮಾದ ಪ್ರಮುಖ ಪಾತ್ರಧಾರಿಗಳು. ಥ್ರಿಲ್ಲರ್ ಕಥನಗಳ ಮೂಲಕ ಜನಮನ ಗೆದ್ದಿರುವ ನಿರ್ದೇಶಕ ಲೋಕೇಶ್ ಕನಕರಾಜ್ ತಮ್ಮದೇ ಚಿತ್ರಕಥೆಯನ್ನು ಈ ಸಲವೂ ನೆಚ್ಚಿಕೊಂಡಿದ್ದಾರೆ. ‘ಕೈದಿ’, ‘ಮಾಸ್ಟರ್’, ‘ವಿಕ್ರಮ್’ – ಹೀಗೆ ಹಿಟ್ ಸಿನಿಮಾಗಳನ್ನು ಕೊಟ್ಟಿರುವ ಅವರು ಈ ವರ್ಷ ದೀಪಾವಳಿಗೆ ಎಂತಹ ಪಟಾಕಿ ಸಿಡಿಸುವರೋ ಎನ್ನುವುದು ಅಭಿಮಾನಿಗಳ ನಿರೀಕ್ಷೆ.

‘ಬೀಸ್ಟ್’ ತಮಿಳು ಚಿತ್ರದ ಸೋಲಿನ ನಂತರ ಒಂದು ಯಶಸ್ಸಿಗಾಗಿ ವಿಜಯ್ ಕೂಡ ಎದುರು ನೋಡುತ್ತಿದ್ದಾರೆ. ■

# ‘ಅನಿಮಲ್’ನಲ್ಲಿ ರಣಬೀರ್ ಹಿಂಸಾವತಾರ

‘ಅರ್ಜುನ್ ರೆಡ್ಡಿ’ ತೆಲುಗು ಸಿನಿಮಾದ ಯಶಸ್ಸಿನ ಅಲೆಮೇಲೆಯೇ ವರ್ಷಗಟ್ಟಲೆ ಕಳೆದುಹೋದವರು ಸಂದೀಪ್ ರೆಡ್ಡಿ ವಂಗ. ಪುರುಷಾಹಂಕಾರದ ಮೂಟೆಯನ್ನು ತೆರೆಯ ತುಂಬಾ ಉರುಳಿಸಿ, ಸದ್ದು–ಟೀಕೆ ಎರಡಕ್ಕೂ ಕಾರಣರಾದ ನಿರ್ದೇಶಕ ಅವರು. ಹಿಂದಿಯಲ್ಲಿ ‘ಕಬೀರ್ ಸಿಂಗ್’ ಹೆಸರಿನಲ್ಲಿ ಅವರು ‘ಅರ್ಜುನ್ ರೆಡ್ಡಿ’ಯನ್ನು ರೀಮೇಕ್ ಮಾಡಿ ಹಣ ಬಾಚಿ ಕೊಟ್ಟರು. ಈಗ ನಟ ರಣಬೀರ್ ಕಪೂರ್ ಕೂಡ ಅವರನ್ನೇ ನೆಚ್ಚಿಕೊಂಡಿದ್ದಾರೆ. ಸಂದೀಪ್ ನಿರ್ದೇಶನದ ‘ಅನಿಮಲ್’ ಹಿಂದಿ ಚಿತ್ರದ ಮೊದಲ ಝಲಕ್ ಇರುವ ವಿಡಿಯೊ ಇತ್ತೀಚೆಗೆ ಬಿಡುಗಡೆಯಾಗಿದೆ. ರಕ್ತಸಿಕ್ತ ಕೊಡಲಿಯನ್ನು ಕಂಕುಳಲ್ಲಿ ಸಿಕ್ಕಿಸಿಕೊಂಡ, ಕ್ರೋಧದಲ್ಲಿ ಅದ್ದಿ ತೆಗೆದಂಥ ರೂಪದಲ್ಲಿ ರಣಬೀರ್ ಕಾಣಿಸಿಕೊಂಡಿದ್ದು, ಅದನ್ನು ನೋಡಿ ಆಲಿಯಾ ಭಟ್ ಬೆಂಕಿ ಜ್ವಾಲೆಯ ಎಮೋಜಿ ಹಾಕಿ ಪ್ರತಿಕ್ರಿಯಿಸಿದ್ದಾರೆ.

‘ಬ್ರಹ್ಮಾಸ್ತ್ರ’ ಮೊದಲ ಭಾಗದ ಸಿನಿಮಾದ ದಯನೀಯ ಸೋಲಿನಿಂದ ರಣಬೀರ್ ಚೇತರಿಸಿಕೊಳ್ಳಬೇಕಿದೆ. ‘ಅನಿಮಲ್’ನ ಹಿಂಸಾವತಾರವನ್ನು ಅವರು ನೆಚ್ಚಿಕೊಂಡಿದ್ದಾರೆ. ಅವರಿಗೆ ನಾಯಕಿಯಾಗಿ ರಶ್ಮಿಕಾ ಮಂದಣ್ಣ ಇದ್ದಾರೆ. ಹಿಂದಿಯ ಈ ಸಿನಿಮಾವನ್ನು ತೆಲುಗು, ತಮಿಳು, ಮಲಯಾಳಂ ಅಲ್ಲದೆ ಕನ್ನಡದಲ್ಲೂ ಡಬ್ ಮಾಡಲು ಸಂದೀಪ್ ನಿಶ್ಚಯಿಸಿದ್ದಾರೆ. ಈ ವರ್ಷದ ಮಧ್ಯಭಾಗದಲ್ಲಿ ಸಿನಿಮಾ ತೆರೆಕಾಣುವ ಸಾಧ್ಯತೆ ಇದೆ. ■

